ಹೆದರಿ ಮೊಂಡು ವಿದ್ಯಾರ್ಥಿಗಳು ದಾರಿಗೆ ಬರುತ್ತಿದ್ದರು. ಇನ್ನೂ ಕೆಲವರು ಮೇಷ್ಟ್ರ ಏಟುಗಳಿಗೆ ಹೆದರಿ ಶಾಲೆಗೆ ರಾಜೀನಾಮೆ ಬಿಸಾಕಿ ಹೊಲಗಳಲ್ಲಿ ಉದ್ಯೋಗಸ್ಥರಾಗುತ್ತಿದ್ದರು. ವಿದ್ಯಾರ್ಥಿಗಳ ದುಶ್ಚಟಗಳಂತೂ ಆ ಬೆತ್ತದ ರುಚಿಯನ್ನು ಕಂಡ ಮೇಲೆ ಹೇಳ ಹೆಸರಿಲ್ಲದೆ ಓಡಿಹೋಗುತ್ತಿದ್ದವು.



ಈಗ ಕಾಲ ಬದಲಾಗಿದೆ. ಹಿಂದೆ ದಂಡಿಸುತ್ತಿದ್ದಂತಹ ಶಿಕ್ಷಕರೂ ಈಗಿಲ್ಲ. ಹಾಗೆಯೇ ಏಟುಗಳಿಗೆ ಮೈಯೊಡ್ಡುವಂತಹ ಗುರುವಿನ ಗುಲಾಮರೂ ಈಗ ಸಿಗುವುದಿಲ್ಲ. ಹಾಗೇನಾದರೂ ಒಂದೆರಡು ಏಟು ಬಿದ್ದರಂತೂ ಆ ವಿಷಯ ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತನೆಯಾಗಿ, ಅಲ್ಲಿಂದ ಸಹೃದಯ ಜನರ ಲೈಕು–ಕಾಮೆಂಟ್‌ಗಳನ್ನು ಹೀರಿ ಬೆಳೆದು, ಅಲ್ಲಿಂದ ಟೀವಿ ಚಾನೆಲ್‌ಗಳ ಬಾಯಿಗೆ ಆಹಾರವಾಗಿ, ‘ವಿದ್ಯಾರ್ಥಿಯ ಮೇಲೆ ಶಿಕ್ಷಕನಿಂದ ಹಲ್ಲೆ’ ಎಂಬ ಬ್ರೇಕಿಂಗ್ ನ್ಯೂಸ್ ಅನ್ನು ಪದೇಪದೇ ಬಿತ್ತರಿಸಿ, ಶಿಕ್ಷಕ ಅಥವಾ ವಿದ್ಯಾರ್ಥಿ ಇಬ್ಬರಲ್ಲೊಬ್ಬರನ್ನು ಶಾಲೆಯಿಂದ ಹೊರಗೆ ಹಾಕಿಸುವವರೆಗೂ ಟೀವಿ ನಿರೂಪಕರು ವಿರಮಿಸುವುದಿಲ್ಲ. ಹಿಂದೆಲ್ಲಾ ಶಾಲೆಯಲ್ಲಿ ಮೇಷ್ಟ್ರು ಹೊಡೆದರು ಎಂದೇನಾದರೂ ಮಕ್ಕಳು ಮನೆಗೆ ದೂರು ತಂದರೆ, ಮನೆಯಲ್ಲಿಯೂ ಹೆಚ್ಚುವರಿಯಾಗಿ ಬೀಳುತ್ತಿದ್ದವು. ಕೆಲವೊಮ್ಮೆ ಪೋಷಕರೇ ಸ್ಕೂಲಿಗೆ ಬಂದು ‘ತಮ್ಮ ಮಗನಿಗೆ ನಾಲ್ಕು ಇಕ್ಕಿ, ಬುದ್ಧಿ ಕಲಿಸಿ’ ಎಂದು ಶಿಫಾರಸ್ಸು ಮಾಡಿ ಹೋಗುತ್ತಿದ್ದರು. ಈಗ ಶಾಲೆಗಳಲ್ಲಿ ಹೊಡೆಯಲು ಕಡ್ಡಿಯನ್ನೇ ಇಡುವಂತಿಲ್ಲವಂತೆ, ಮಕ್ಕಳ ಮೇಲೆ ಕೈ ಮಾಡುವಂತೆಯೂ ಇಲ್ಲವಂತೆ. ಹಾಗಾಗಿ ಶಿಕ್ಷಕರೂ ಕೂಡ ‘ಏನಾದರೂ ಮಾಡಿಕೊಂಡು ಹಾಳಾಗಿ ಹೋಗಲಿ, ನಮಗ್ಯಾಕೆ ಇಲ್ಲದ ಉಸಾಬರಿ, ಬುದ್ಧಿ ಕಲಿಸಲು ಹೋಗಿ ಉದ್ಯೋಗ ಏಕೆ ಕಳಕೊಳ್ಳಬೇಕು? ಕೆಟ್ಟ ಹೆಸರು ಯಾಕೆ?’ ಎಂದು ತಲೆಕೆಡಿಸಿಕೊಳ್ಳದೆ, ಪಾಠ ಒದರಿಕೊಂಡು ಹೋಗುವುದನ್ನು ಕಲಿತಿದ್ದಾರೆ.

ಈಗಿನ ಮಕ್ಕಳು ಏಟು ತಿನ್ನದ ಅದೃಷ್ಟವಂತರು ಎಂದು ಸಂತೋಷಪಡಬೇಕೋ ಅಥವಾ ಜೀವನದ ಪಾಠಗಳಿಂದ ವಂಚಿತರಾಗುತ್ತಿರುವುದರ ಬಗ್ಗೆ ಮರುಗಬೇಕೋ ತಿಳಿಯುತ್ತಿಲ್ಲ. ಹಾಗಾಗಿಯೇ ಕೆಲವು ಮಕ್ಕಳು ಹೈಸ್ಕೂಲಿಗೆ ಬರುವಷ್ಟರಲ್ಲಿ ಹಲವು ದುಶ್ಚಟಗಳನ್ನು ಅಂಟಿಸಿಕೊಂಡಿರುತ್ತಾರೆ. ಮೇಷ್ಟ್ರ ಭಯ ಸ್ವಲ್ಪಮಟ್ಟಿಗೆ ಇದ್ದರೆ ಒಳ್ಳೆಯದು ಎಂಬುದಕ್ಕೆ ಒಂದು ಉದಾಹರಣೆಯೆಂದರೆ, ನಾವು ನಮ್ಮ ಹಳ್ಳಿಯಿಂದ ಪಕ್ಕದೂರಿನ ಶಾಲೆಗೆ ನಡೆದುಕೊಂಡು ಹೋಗಿ ಬರುವಾಗ ದಾರಿಯುದ್ದಕ್ಕೂ ರಾಜ–ರಾಣಿ (ದುಡ್ಡಿನ ಆಟವನ್ನು) ಆಡುತ್ತಾ ಬರುತ್ತಿದ್ದೇವೆಂದು ನಮ್ಮ ಮೇಷ್ಟ್ರಿಗೆ ಗೊತ್ತಾಗಿ, ನಮ್ಮನ್ನೆಲ್ಲಾ ಕರೆದು, ಪಿಕಾಸಿಯ ಕಾವಿನಿಂದ ಕೈಯಲ್ಲಿ ಬಾಸುಂಡೆ ಬರುವಂತೆ ಎಲ್ಲರಿಗೂ ಬಾರಿಸಿದ್ದರು. ನಾವು ದುಡ್ಡಿನಾಟ ಆಡುವುದನ್ನು ಬಿಡುವಂತೆ ಮಾಡಿದ, ಚೆನ್ನಾಗಿ ಓದಿ ಒಳ್ಳೆಯ ಶಿಲೆಗಳಾಗುವಂತೆ ಮಾಡಿದ ಆ ಉಳಿಪೆಟ್ಟುಗಳನ್ನು ನಾವೆಲ್ಲಾ ಸದಾ ಸ್ಮರಿಸುತ್ತೇವೆ.

ಆಗೆಲ್ಲಾ ದಿನವೂ ಒಂದಲ್ಲ ಒಂದು ಕಾರಣಕ್ಕೆ ಶಾಲೆಯಲ್ಲಿ ತಪ್ಪಿದರೆ ಮನೆಯಲ್ಲಿ ಜಡಿಮಳೆಯಂತೆ ಬೀಳುತ್ತಿದ್ದ ಏಟುಗಳಿಗೆ ಮೈಯೊಡ್ಡುತ್ತಿದ್ದ ಆಗಿನ ಮಕ್ಕಳು ನುರಿತ ರೈತನು ಆಕಾಶ ನೋಡಿ ಮಳೆಯ ಆಗಮನವನ್ನು ಗ್ರಹಿಸುವಂತೆ, ಅಪ್ಪನ ಮುಖ ನೋಡಿಯೇ, ತನಗೆ ಇಂದು ಬೀಳಬಹುದಾದ ಏಟುಗಳ ತೀವ್ರತೆಯನ್ನು ಅಂದಾಜು ಮಾಡುವಷ್ಟು ಪರಿಣತಿಯನ್ನು ಪಡೆದಿರುತ್ತಿದ್ದರು. ಮಳೆ ಬರುವುದಕ್ಕಿಂತ ಮುಂಚೆ ಬೀಸುವ ಬಿರುಗಾಳಿ, ಮಿಂಚುಗಳಂತೆ ಏಟು ಬೀಳುವ ಮುಂಚೆ ಅದರ ಮುನ್ಸೂಚನೆಗಳು ಕೂಡ ಯಥೇಚ್ಛವಾಗಿ ಸಿಗುತ್ತಿದ್ದವು. ಉದಾಹರಣೆಗೆ, ‘ಇವೊತ್ತು ನಿನಗೆ ದೂಳು ಕೊಡುವ್‌ತೀನಿ’, ‘ಇವೊತ್ತು ನೀನು ಎಡಗಡೆ ಮಗ್ಗುಲಲ್ಲಿ ಎದ್ದಿದೀಯಂತ ಕಾಣ್ಸುತ್ತೆ’, ‘ಇವೊತ್ತು ನಿನಗೆ ಗ್ರಹಚಾರ ಬಿಡುಸ್ತೀನಿ’, ‘ಯಾವ ನಕ್ಷತ್ರದಲ್ಲಿ ಹುಟ್ಟೇದೀಯೋ ನೀನು’ ಇತ್ಯಾದಿ ಹೇಳಿಕೆಗಳು ಬರುತ್ತಿವೆ ಎಂದ ತಕ್ಷಣ ಬೀಳಬಹುದಾದ ಏಟುಗಳನ್ನು ಗ್ರಹಿಸಿ, ತಕ್ಷಣ ಎಚ್ಚೆತ್ತುಕೊಂಡು ನಮ್ಮ ನಡೆ, ನುಡಿಯನ್ನು ಸರಿಪಡಿಸಿಕೊಳ್ಳುತ್ತಿದ್ದೆವು. ಮೊಂಡಾಗಿದ್ದ ನಮ್ಮ ಸಂವೇದನೆಗಳು ಬೀಳಬಹುದಾದ ಒದೆಗಳ ಭಯದಿಂದ ಒಂದಷ್ಟು ಮೊನಚಾದವು. ಈ ಎಚ್ಚರಿಕೆಯ ನಡೆಗಳು ನಮ್ಮ ಬಾಳಹಾದಿಯಲ್ಲೂ ಕೂಡ ಹೆಚ್ಚು ತಪ್ಪುಗಳಾಗದಂತೆ ನಮ್ಮನ್ನು ಕಾಯುತ್ತಿವೆ. ಆಗಿನ ವ್ಯಂಗ್ಯ, ಅಪಮಾನ, ಏಟು ಎಲ್ಲವೂ ನಮ್ಮನ್ನು ‘ಕಲ್ಲಾಗು ಕಷ್ಟಗಳ ಮಳೆ ವಿಧಿ ಸುರಿಯೆ’ ಎನ್ನುವಂತೆ ಎಂತಹ ಕಷ್ಟಗಳಿಗೂ ಹೆದರದೆ, ಸೋಲಿಗೆ ಅಳುಕದೆ, ಬದುಕನ್ನು ಹೆಚ್ಚು ಪ್ರೀತಿಸುವಂತೆ ನಮ್ಮನ್ನು ತಯಾರುಮಾಡಿವೆ. ಈಗಿನ ಯುವ ಪೀಳಿಗೆಯಲ್ಲಿ ಕ್ಷುಲ್ಲಕ ಕಾರಣಗಳಿಗೆ ಆತ್ಮಹತ್ಯೆ ಮಾಡಿಕೊಳ್ಳುವ ಪರಿಪಾಟ ಹೆಚ್ಚುತ್ತಿದೆ. ಮೊಬೈಲ್ ಕೊಡಿಸಲಿಲ್ಲವೆಂದೋ, ಕ್ಲಾಸಿನಲ್ಲಿ ಚೆನ್ನಾಗಿ ಓದು ಎಂದು ಹೇಳಿದ್ದಕ್ಕೋ, ಟೀವಿಯಲ್ಲಿ ಚಾನೆಲ್ ಬದಲಾಯಿಸುವ ವಿಷಯಕ್ಕೋ, ಶಾಲೆಯಲ್ಲಿ ಶಿಕ್ಷಕರು ಎಲ್ಲರೆದುರು ವ್ಯಂಗ್ಯ ಮಾಡಿದರು ಎಂಬಂತಹ ಚಿಲ್ಲರೆ ವಿಷಯಗಳಿಗಾಗಿ ಪ್ರಾಣವನ್ನೇ ತೆಗೆದುಕೊಳ್ಳುವಂತಹ ನಿರ್ಧಾರಕ್ಕೆ ಬರುತ್ತಿರುವುದು ಕಳವಳಕಾರಿಯಾಗಿದೆ. ಈ ವಿದ್ಯಮಾನಗಳು ಕೋವಿಡ್ ಕಾಲದ ನಂತರ ಹೆಚ್ಚಾಗಿವೆ. ಆನ್‌ಲೈನ್ ನೆಪದಲ್ಲಿ ಮಕ್ಕಳು ಮೊಬೈಲ್ ಫೋನ್, ಇಂಟರ್ನೆಟ್ ಮೂಲಕ ಪ್ರಪಂಚಕ್ಕೆ ತಮ್ಮನ್ನು ತಾವು ತೆರೆದುಕೊಂಡಿದ್ದಾರೆ. ಅಲ್ಲಿ ಬೇಕಿರುವುದು, ಬೇಕಿಲ್ಲದಿರುವುದೂ ಎಲ್ಲವೂ ಇದೆ. ಈಗ ಮಕ್ಕಳಲ್ಲಿ ಮೊದಲಿನ ಮುಗ್ಧತೆ, ನಾಚಿಕೆ, ಮೌಲ್ಯಗಳು ನಿಧಾನವಾಗಿ ದೂರ ಸರಿಯುತ್ತಿವೆಯೇನೋ ಎನಿಸುತ್ತಿದೆ. ಮಕ್ಕಳ ಮುಗ್ಧ ಮನಸ್ಸು ಗಾಜಿನಷ್ಟು ಸೂಕ್ಷ್ಮವಾಗುತ್ತಿರುವುದಂತೂ ದಿಟ.

ಒರಟು ಕಲ್ಲಿಗೆ ಉಳಿಯ ಪೆಟ್ಟುಗಳು ಬೀಳದೆ ಸುಂದರ ಶಿಲೆಯಾಗಲು ಹೇಗೆ ಸಾಧ್ಯ? ಈಗಿನ ಮಕ್ಕಳಿಗೆ ಅಪಮಾನ, ಕಷ್ಟ, ಹಸಿವು ಮುಂತಾದ ಉಳಿಪೆಟ್ಟು ಬೀಳುವ ಅವಕಾಶವೇ ಇಲ್ಲ. ಹಾಗಾಗಿ ತಯಾರಾಗುತ್ತಿರುವ ಪ್ರತಿಮೆಗಳು ಕೂಡ ಠೊಳ್ಳಾಗುತ್ತಿವೆ. ಸ್ವಲ್ಪ ಕೈ ಜಾರಿದರೂ ‘ಠಳಾರ್’ ಎಂದು ಪುಡಿಪುಡಿಯಾಗುತ್ತವೆಯೇನೋ ಅನಿಸುತ್ತದೆ. ಇಲ್ಲದಿದ್ದರೆ ಗದರುವುದು, ಧ್ವನಿ ಏರಿಸಿ ಮಾತನಾಡಿದರೆ ಅದನ್ನೇ ಶಿಕ್ಷೆ ಎಂದು ಪರಿಗಣಿಸಿ ಆತ್ಮಹತ್ಯೆಯಂತಹ ಕೃತ್ಯಗಳಿಗೆ ಕೈ ಹಾಕುತ್ತಿರಲಿಲ್ಲವೇನೋ. ಇಂದಿನ ಮಕ್ಕಳಿಗೆ ನಿಜವಾದ ಶಿಕ್ಷೆ ಎಂದರೇನು? ಹಿಂದೆಲ್ಲಾ ಶಾಲೆಗಳಲ್ಲಿ ಮತ್ತು ಮನೆಗಳಲ್ಲಿ ಅಶಿಸ್ತು, ಅವಿಧೇಯತೆ ತೋರುವ ಮಕ್ಕಳಿಗೆ ಯಾವ ರೀತಿ ಬೆಂಡ್ ಎತ್ತಲಾಗುತ್ತಿತ್ತು ಎಂಬುದನ್ನು ಹೇಳಬೇಕೆನಿಸುತ್ತದೆ. ಬಡತನವನ್ನು ಮೆಟ್ಟಿ, ಕಷ್ಟಗಳನ್ನು ಎದುರಿಸಿ, ವ್ಯಂಗ್ಯ ಅಪಮಾನಗಳನ್ನು ಮೀರಿ ಬೆಳೆದಾಗಲೇ ಸುಂದರ